ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ.

ವಿಷಯ : ಎಕ್ಸೈಸ್ ರೂಲ್ಸ್‌ಗೆ ತಿದ್ದುಪಡಿ ತಂದಿರುವ ಬಗ್ಗೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತಿನ ದಿವಸ ಏನು ಎಕ್ಸೈಜ್ ರೂಲ್ಸ್‌ಗೆ ತಿದ್ದುಪಡಿ ತಂದು 38 ಕೋಟಿ ರೂಪಾಯಿ ಬಡ್ಡಿ ಮನ್ನಾ ಮಾಡತಕ್ಕದ್ದು, 42 ಕೋಟಿ ರೂಪಾಯಿ ಅಸಲನ್ನು ಕಂತುಗಳ ಮೂಲಕ ವಸೂಲ್ಮಾಡುವುದಕ್ಕೆ ಅವಕಾಶ ಮಾಡಿಕೊಂಡಿದ್ದಾರೆ. ಆ ಬಗ್ಗೆ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಇದರ ಬಗ್ಗೆ ವಿಶೇಷವಾದ ಸಂದರ್ಭದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೀರಿ. ಇದು ಇವತ್ತು ವಿಧಾನ ಪರಿಷತ್ತಿನಲ್ಲಿ ಚರ್ಚೆಗೆ ಬರುವ ಸಂದರ್ಭ ಇದೆ. ಆದ್ದರಿಂದ ಇದನ್ನು ಇಲ್ಲಿಯೂ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಆ ಸದನದಲ್ಲಿ ಈ ವಿಚಾರ ಬಂದಿದೆ. ಆದರೆ ನಮ್ಮ ಅಬ್ಕಾರಿ ಮತ್ತು ಗೃಹಸಚಿವರು ಇಲ್ಲದೇ ಇದ್ದುದರಿಂದ ಅಲ್ಲಿ ಕಾಲಾವಕಾಶ ಕೇಳಿದ್ದೇವೆ. ಅವರು ಎರಡನೇ ತಾರೀಖು ಬರುತ್ತಾರೆ. ಮೂರನೇ ತಾರೀಖು ಅಥವಾ ನಾಲ್ಕನೇ ತಾರೀಖು ಇದನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ. ತಾವು ಅವಕಾಶ ಕೊಟ್ಟರೆ ಅವರು ಯಾವಾಗಲಾದರೂ ಉತ್ತರ ಕೊಡಲಿ. ನನ್ನ ಉದ್ದೇಶವೇನೆಂದರೆ ಒಂದೊಂದು ದಿವಸ ತಡೆದರೂ ಸಹ ಗೆಜೆಟ್ ನೋಟಿಫಿಕೇಷನ್ 25ನೇ ತಾರೀಖು ಏನು ಮಾಡಿದ್ದೇವೆ ಇದರ ಶೆಲ್ಟರ್ ಕೋರ್ಟ್‌ಗಳಲ್ಲಿ ತೆಗೆದುಕೊಂಡು ಈ ಹಣವನ್ನು ಉಳಿಸಿಕೊಳ್ಳತಕ್ಕದ್ದು ಮತ್ತು ಬೇರೆ ಬೇರೆ ಅವರಿಗೆ ಅನುಕೂಲ ಆಗುವ ಸಂದರ್ಭ ಇದೆ. ಆದುದರಿಂದ ಒಂದು ನಿಮಿಷ ಕೂಡ ತಡ ಮಾಡುವ ಸಂಗತಿ ಇಲ್ಲ. ಅದಕ್ಕಾಗಿ ನಾನು ಮೊದಲನೇ ದಿನವೇ ಪ್ರಸ್ತಾಪ ಮಾಡುವ ಪ್ರಯತ್ನ ಮಾಡಿದೆ. ಅದು ಅತ್ಯಂತ ಪ್ರಾಮುಖ್ಯವಾದುದು. ನೂರಾರು ಕೋಟಿ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ಬರತಕ್ಕದ್ದು ಲೂಟಿಯಾಗುವ ಸಂದರ್ಭ ಇದರಲ್ಲಿದೆ. ಅದಕ್ಕಾಗಿ ನಾನು ವಿನಂತಿ ಮಾಡುವುದು ಏನೆಂದರೆ, ಎಕ್ಸೈಜ್ ಮಿನಿಸ್ಟರ್ ವಿಶೇಷ ಕಾರಣಕ್ಕೆ ಇಲ್ಲದೇ ಇರುವುದರಿಂದ ಮುಖ್ಯಮಂತ್ರಿಗಳು ಅಥವಾ ಯಾರಾದರೂ ತಕ್ಷಣ ಸರ್ಕಾರದ ಪರವಾಗಿ ಹಣಕಾಸಿಗೆ ಸಂಬಂಧಿಸಿದ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಫೈನಲ್ ನೋಟಿಫಿಕೇಷನ್ ಆಗಿದೆಯೇ ? ವಿತಕ್ಕೋಸ್ಕರ ತರಬೇಕಾದ ಸಂದರ್ಭ ಬಂತು? ಕೊನೇಪಕ್ಷ ನಾನು ವಿನಂತಿ ಮಾಡಿಕೊಳ್ಳುವುದು ಏನೆಂದರೆ ಎರಡನೇ ತಾರೀಖಿನವರೆಗೂ ಆಪರೇಟ್ ಮಾಡದಹಾಗೆ ಸ್ಟೇ ಆದರೂ ಕೊಡುವುದಕ್ಕೆ ಸರ್ಕಾರ ಒಪ್ಪಿಕೊಳ್ಳುವುದಾದರೆ ಸರಿ. ಇಲ್ಲದಿದ್ದರೆ ದೊಡ್ಡ ಅನಾಹುತವಾಗುತ್ತದೆ. ನೂರಾರು ಕೋಟಿ ರೂಪಾಯಿ ಲೂಟಿಯಾಗುತ್ತದೆ. ಆದ್ದರಿಂದ ದಯಮಾಡಿ ಸರ್ಕಾರ ಅದಕ್ಕೆ ಅವಕಾಶ ಮಾಡಿಕೊಡದೆ ಅಲ್ಲಿಯವರೆಗೆ ಸಸ್ಪೆಂಡ್ ಮಾಡುವುದಕ್ಕೆ, ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ಅಥವಾ ಅದನ್ನು ಆಪರೇಟ್ ಮಾಡದಂತೆ ಆಶ್ವಾಸನೆ ಕೊಟ್ಟರೆ ಆಗಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಈ ರೂಲ್ ಸರ್ಕಾರಕ್ಕೆ ಪವರ್ ತೆಗೆದುಕೊಳ್ಳುವುದಕ್ಕೆ ಇರತಕ್ಕದ್ದು. Automatically it will not apply. It gives certain powers to Government. I can agree with you

till certain discussion comes ಈ ರೂಲ್‌ನಲ್ಲಿ ಏನು ಪವರ್ ನಮಗೆ ಬಂದಿದೆ ಅದು ಎಕ್ಸರ್ಸೈಸ್ ಮಾಡದಹಾಗೆ ಅಂದರೆ, We will not exercise that kind of a power. There is no problem at all.

MR. SPEAKER :The rule itself does not create any right on the part of those who still owe arrears to the Government. The discretion is left..

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು 25ನೇ ತಾರೀಖು ಜನವರಿಯದು. ಇದಾದಮೇಲೆ ಮತ್ತೊಂದು ಫೈನಲ್ ಗೆಜೆಟ್ ನೋಟಿಫಿಕೇಷನ್ ಆಗಿದೆ.

ಶ್ರೀ ಹೆಚ್. ಏಕಾಂತಯ್ಯ : ಇದು ಡ್ರಾಫ್ಟ್ ರೂಲ್. 5ನೇ ತಾರೀಖು ಇನ್ನೊಂದು ನೋಟಿಫಿಕೇಷನ್ ಆಗಿದೆ. ಈಗ ಮಾನ್ಯ ಮೊಯಿಲಿಯವರು ಹೇಳಿದಂತೆ ಆ ರೂಲನ್ನು ಅನುಸರಿಸಿ ನಾವು ಯಾವುದನ್ನೂ ರಿಯಾಯಿತಿ ಕೊಡುವುದಿಲ್ಲ ಎಂದರೆ ಅದು ಬೇರೆ ಪ್ರಶ್ನೆ. ಆದರೆ..

ಅಧ್ಯಕ್ಷರು : ಏಕಾಂತಯ್ಯನವರೆ, ರೂಲ್ ಏನಿದೆಯೆಂದರೆ, "Not withstanding anything contained in these rules, the State Government may, if it considers necessary so to do in the interest of expeditious recovery of the arrears. So the discretion rests with the Government and when the Government assures that we are not going to do..

ಶ್ರೀ ಹೆಚ್. ಏಕಾಂತಯ್ಯ : ತಾವು ಅದನ್ನು ಹೇಳಿದ್ದರಿಂದ ಮುಂದೆ ಮಾತನಾಡುವ ಅವಶ್ಯಕತೆ ಇಲ್ಲ. ಏತಕ್ಕೋಸ್ಕರ ನಮ್ಮ ಆತಂಕ ಇದೆ ಎಂದರೆ, ಒಂದು ಪಕ್ಷ ಅವರು ಎಕ್ಸರ್‌ಸೈಸ್ ಮಾಡಿ ರಿಯಾಯಿತಿ ತೋರಿಸಿದರೆ he cannot ignore it. ಒಂದು ಪಕ್ಷ ರೂಲ್ ವಾಪಸ್ ತೆಗೆದುಕೊಂಡರೂ ಸಹ ಅಥವಾ ಅದನ್ನು ನಾವು ಅಮೆಂಡ್ ಮಾಡಿದರೂ ಸಹ ಈಗಾಗಲೇ ರೂಲನ್ನು ಅನುಸರಿಸಿ ಏನಾದರೂ ರಿಯಾಯಿತಿ ಕೋರ್ಟಿನಲ್ಲಿ ಆಗಿದ್ದರೆ ಅಥವಾ ಕೊಟ್ಟರೆ ಅದರಿಂದ ನಮಗೇನೂ ಲಾಭ ಆಗುವುದಿಲ್ಲ, ಅಮೆಂಡ್‌ಮೆಂಟ್ ಮಾಡಿದರೂ ಆಗುವುದಿಲ್ಲ, ಏನು ಮಾಡಿದರೂ ಆಗುವುದಿಲ್ಲ. ಆದ್ದರಿಂದ ನಾನು ಹೇಳಿದೆ. ಅವರು ಒಪ್ಪಿಕೊಂಡಿದ್ದಾರೆ. You cannot exercise that power which is vested with them under that rule. If if could not be exercised till then, it is alright.

MR. SPEAKER : If you are satisfied I am satisfied.

SRI C. BYREGOWDA : There must be a firm assurance that they are not going to resort to this rule.

MR. SPEAKER : Mr. Ekanthaiah is satisfied, Mr. Yediyurappa is satisfied. Only Mr. Byregowda is not satisfied.

SRI C. BYREGOWDA : Sir, it is a part of a tip of an iceberg only. The whole iceberg is still submerged in the sea.

ಅಧ್ಯಕ್ಷರು : ಬೈರೇಗೌಡರೆ, ಈ ಬೇಡಿಕೆ ಡಿಸ್ಕಷನ್‌ಗೆ ಬರುತ್ತದೆ. ಆದ್ದರಿಂದ You will have enough opportunities, scope.

ಎಲ್ಲಾ ಚರ್ಚೆ ಮಾಡಬಹುದು. ಸದ್ಯಕ್ಕೆ ಸರ್ಕಾರದ ಪರವಾಗಿ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಈ ಅಷ್ಯೂರೆನ್ಸ್ ಕೊಟ್ಟಿದ್ದಾರೆ. On the basis of this assurance we can proceed further. We will take it as soon as the Excise Minister comes back.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ವಿಶೇಷವಾದ ಚರ್ಚೆಗೆ ಅವಕಾಶ ಕೊಡಿ ಸ್ವಾಮಿ.

ಅಧ್ಯಕ್ಷರು : ಎಕ್ಸೈಜ್ ಮಿನಿಸ್ಟರ್ ಬಂದಮೇಲೆ ಕೊಡೋಣ.

SRI M. VEERAPPA MOILY : Excise Minister. He is the Minister incharge of the portfolio. We do not exercise any discussion on it till he comes back. Let us not proceed further.

ಶ್ರೀ ವಾಟಾಳ್ ನಾಗರಾಜ್ : ಈ ಗುತ್ತಿಗೆದಾರರು ಸರ್ಕಾರವನ್ನು ನುಂಗತಕ್ಕವರಿದ್ದಾರೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಈ ಜಂಟಿ ಅಧಿವೇಶನದಲ್ಲಿ ದಯಪಾಲಿಸಿದ ಭಾಷಣಕ್ಕೆ ಉತ್ತರ ಕೊಡುವ ಸಂದರ್ಭ ಸರ್ಕಾರಕ್ಕೆ ಬರುವುದಕ್ಕಿಂತಲೂ ಮುಂಚೆ ನಾನು ಪ್ರಾರಂಭದಲ್ಲಿ ಈ ರಾಜ್ಯಪಾಲರ ಭಾಷಣವನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತಾ, ಈ ರಾಜ್ಯಪಾಲರ ಭಾಷಣದಲ್ಲಿ ಅನೇಕ ಉರಿಯುತ್ತಿರುವ ಸಮಸ್ಯೆಗಳಿಗೆ ನಿರ್ದಿಷ್ಟವಾದ ಯಾವುದೇ ಒಂದು ಪರಿಹಾರ ಇಲ್ಲ, ಮಾರ್ಗಸೂಚಿ ಇಲ್ಲ, ಸರ್ಕಾರ ಮುಂದಿನ ವರ್ಷಗಳಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ ಎನ್ನುವುದರ ಬಗ್ಗೆ ಸ್ಪಷ್ಟವಾದ ಮಾತು ಇಲ್ಲ, ಈ ರೀತಿ ಈ ಬರಡು ಭಾಷಣ ಏನು ಇದೆ ಇದನ್ನು ನಾನು ಸಂಪೂರ್ಣ ವಿರೋಧ ಮಾಡುತ್ತಾ ಈ ಸರ್ಕಾರ ಅಧಿಕಾರಕ್ಕೆ ಬಂದ ಕಳೆದ 1 ವರ್ಷದಲ್ಲಿ ಕಳೆದ ರಾಜ್ಯಪಾಲರ ಭಾಷಣದ ಅಲ್ಲಿಂದ ಇಲ್ಲಿಗೆ ಒಂದು ವರ್ಷದ ಅವಧಿಯಲ್ಲಿ ಈ ಸರ್ಕಾರದ ಒಂದು ಅಡಳಿತ ವೈಖರಿ ಬಗ್ಗೆ, ಜನವಿರೋಧಿ ನೀತಿ ಬಗ್ಗೆ, ಅನೇಕ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಸದನದ ಒಳಗೆ ಹಾಗೂ ಹೊರಗಡೆ ಸಾಕಷ್ಟು ಹೋರಾಟವನ್ನು ಮಾಡಿ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ಅದರಿಂದ ಯಾವುದೇ ಒಂದು ಉಪಯೋಗ ಆಗಲಿಲ್ಲ. ಒಂದು ವಿಶೇಷವಾದ ಸಂದರ್ಭದಲ್ಲಿ ಒಂದು ಅವಿಶ್ವಾಸ ನಿರ್ಣಯವನ್ನು ತಂದು ಅನೇಕ ಭ್ರಷ್ಟಾಚಾರದ ಹಗರಣಗಳ ದಾಖಲೆಗಳನ್ನು ಈ ಸದನದ ಮುಂದೆ ಇಟ್ಟು ಒತ್ತಾಯ ಮಾಡುವಂತಹ ಪ್ರಯತ್ನವನ್ನು ನಾವು ಮಾಡಿದೆವು, ಅಬಕಾರಿ, ಗ್ರಾನೈಟ್ ಭ್ರಷ್ಟಾಚಾರದ ಹಗರಣಗಳನ್ನು ದಾಖಲೆಗಳೊಡನೆ ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಿದೆವು. ಸಾವಿರಾರು ಎಕರೆ ಜಮೀನನ್ನು ರೀಕನ್ವೆ ಮಾಡಿ ದೊಡ್ಡ ದೊಡ್ಡ ಬಿಲ್ಡರ್ಸ್‌ಗೆ ಕೊಡುವ ಪ್ರಯತ್ನವನ್ನು ಸರ್ಕಾರ ಮಾಡಿದಾಗ ಅದನ್ನು ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಮಾಡಿದೆವು.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ರೈತ ಸಮುದಾಯಕ್ಕೆ ಕೊಟ್ಟ ಆಶ್ವಾಸನೆಯನ್ನು ಈಡೇರಿಸದೇ 10 ಸಾವಿರ ರೂಪಾಯಿಗಳವರೆಗಿನ ಸಾಲ ಮನ್ನಾ ಮಾಡುತ್ತೇವೆಂದು ಅವರಿಗೆ ಅನ್ಯಾಯ